# ‘ವಿಶ್ವ’ಪರೀಕ್ಷೆಗೆ ಸಜ್ಜಾದ ವನಿತೆಯರು

## ಭಾರತೀಯ ಮಹಿಳಾ ಹಾಕಿಯಲ್ಲಿ ಸೃಷ್ಟಿಯಾದೀತೆ ಹೊಸ ಮನ್ವಂತರ?

**ಭಾರತ ಮಹಿಳಾ ಹಾಕಿ ತಂಡ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆಯುವ ಮೂಲಕ ಜಗತ್ತಿನ ಗಮನ ಸೆಳೆಯಿತು. ಆ ಯಶಸ್ಸಿನ ಹಿನ್ನೆಲೆಯಲ್ಲಿ, ಜುಲೈ 1ರಿಂದ 17ರ ತನಕ ನೆದರ್ಲೆಂಡ್ಸ್ ಮತ್ತು ಸ್ಪೇನ್ ಜಂಟಿ ಆತಿಥ್ಯದಲ್ಲಿ ಆಯೋಜನೆಯಾಗಿರುವ ವಿಶ್ವಕಪ್‌ನಲ್ಲಿಯೂ ಎಲ್ಲರ ಕಣ್ಣು ಭಾರತದ ಮೇಲಿದೆ. ನಮ್ಮ ದೇಶದ ವನಿತೆಯರಿಗೆ ಜಾಗತಿಕ ವೇದಿಕೆಯಲ್ಲಿ ತಮ್ಮ ಶಕ್ತಿ ತೋರಿಸಲು ಉತ್ತಮ ಅವಕಾಶ.**

■ ಪ್ರಮೋದ




ಹಲವು ಅಡೆತಡೆಗಳ ನಡುವೆ ಕಳೆದ ವರ್ಷ ಟೋಕಿಯೊದಲ್ಲಿ ಒಲಿಂಪಿಕ್ಸ್ ನಡೆದಾಗ ವಿಶ್ವದ ಕ್ರೀಡಾಪ್ರೇಮಿಗಳು ಕ್ರೀಡಾಶಕ್ತಿಯ ದ್ಯೋತಕವಾದ ಜಪಾನ್ ರಾಷ್ಟ್ರದ ಮೇಲೆ ಕಣ್ಣು ನೆಟ್ಟಿದ್ದರು. ಕೋವಿಡ್ ಆತಂಕದ ನಡುವೆ ನಡೆದ ಜಗತ್ತಿನ ದೊಡ್ಡ ಕ್ರೀಡಾಕೂಟದಲ್ಲಿ ಹಲವು ಅಚ್ಚರಿಯ ಫಲಿತಾಂಶಗಳು ಬಂದವು.

ಅದರಲ್ಲಿ ಭಾರತದ ಮಹಿಳಾ ಹಾಕಿ ತಂಡದ ಸಾಧನೆ ಜಗತ್ತಿನ ಗಮನ ಸೆಳೆಯಿತು. 1980ರ ಮಾಸ್ಕೊ ಒಲಿಂಪಿಕ್ಸ್ ಬಳಿಕ ವನಿತೆಯರ ತಂಡ ಸೆಮಿಫೈನಲ್ ಪ್ರವೇಶಿಸಿತ್ತು. ಟೋಕಿಯೊದಲ್ಲಿ ಭಾರತ ಪದಕ ಗೆಲ್ಲದಿದ್ದರೂ ನಾಲ್ಕನೇ ಸ್ಥಾನ ಪಡೆದು ‘ವಿಶ್ವದ ಬಲಿಷ್ಠ ರಾಷ್ಟ್ರಗಳಲ್ಲಿ ನಾನೂ ಒಂದು‘ ಎನ್ನುವ ಸಂದೇಶ ರವಾನಿಸಿತು.

ಭಾರತದ ಆಟಗಾರ್ತಿಯರು ಒಲಿಂಪಿಕ್ಸ್‌ನಲ್ಲಿ ತೋರಿದ ದಿಟ್ಟ ಪ್ರದರ್ಶನ ಈಗ ತಂಡದ ಮೇಲೆ ನಿರೀಕ್ಷೆಗಳ ಮೂಟೆ ಹೊರಿಸಿದೆ. ಮಹಿಳಾ ವಿಶ್ವಕಪ್ ಹಾಕಿಯಲ್ಲಿ ಪಾರುಪತ್ಯ ಮೆರೆದಿರುವ ನೆದರ್ಲೆಂಡ್ ನೆಲದಲ್ಲಿಯೇ ಜುಲೈ 1ರಿಂದ 17ರ ತನಕ ವಿಶ್ವಕಪ್ ಟೂರ್ನಿ ಜರುಗಲಿದೆ. ಸ್ಪೇನ್ ಕೂಡ ಜಂಟಿ ಆತಿಥ್ಯ ವಹಿಸಿಕೊಂಡಿದೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತ ಮಹಿಳಾ ತಂಡ ಐರ್ಲೆಂಡ್, ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ತಂಡಗಳನ್ನು ಮಣಿಸಿತ್ತು. ‘ಅಂತರರಾಷ್ಟ್ರೀಯ ಹಾಕಿ ಫೆಡರೇಷನ್’ ಆಯೋಜಿಸಿರುವ ಮಹಿಳಾ ಪ್ರೊ ಲೀಗ್‌ನಲ್ಲಿ ಭಾರತ ತಂಡ ಚೀನಾವನ್ನು ಎರಡು ಬಾರಿ, ಸ್ಪೇನ್ ಹಾಗೂ ನೆದರ್ಲೆಂಡ್ಸ್ ತಂಡಗಳನ್ನು ಸೋಲಿಸಿದೆ. ಈ ಟೂರ್ನಿ ಜೂನ್ ಅಂತ್ಯದ ತನಕ ನಡೆಯಲಿದ್ದು ಉಳಿದ ಪಂದ್ಯಗಳಲ್ಲಿ ಭಾರತವು ಬೆಲ್ಜಿಯಂ, ಅರ್ಜೆಂಟೀನಾ ಹಾಗೂ ಅಮೆರಿಕ ತಂಡಗಳ ಎದುರು ಆಡಲಿದೆ. ಈ ಟೂರ್ನಿ ಮುಗಿದು ಒಂದು ವಾರದ ಅಂತರದಲ್ಲಿಯೇ ವಿಶ್ವಕಪ್ ಆರಂಭವಾಗಲಿದ್ದು, ಪ್ರೊ. ಲೀಗ್ ಭಾರತದ ವನಿತೆಯರಿಗೆ ಬಲಿಷ್ಠ ತಂಡಗಳ ಎದುರು ಅಭ್ಯಾಸಕ್ಕೆ ಉತ್ತಮ ವೇದಿಕೆಯಾಗಿದೆ.

ವಿಶ್ವಕಪ್‌ನಲ್ಲಿ ಭಾರತ ಲೀಗ್ ಹಂತದಲ್ಲಿ ಮೂರು ಪಂದ್ಯಗಳನ್ನು ಆಡಲಿದ್ದು ಜುಲೈ 3ರಂದು ಇಂಗ್ಲೆಂಡ್, 5ರಂದು ಚೀನಾ ಮತ್ತು 7ರಂದು ನ್ಯೂಜಿಲೆಂಡ್ ತಂಡಗಳ ಎದುರು ಪೈಪೋಟಿ



ಸವಿತಾ ಪೂನಿಯಾ